ಶ್ರೀಮತಿ ಇವಾ ವಾಜ್.—ಆಹಾರ ಮತ್ತು ನಿತ್ಯೋಪಯೋಗಿ ರಾಜ್ಯ ಸಚಿವರು.

ಉತ್ತರ —(ಅ) ಏಪ್ರಿಲ್ ಮತ್ತು ಮೇ ತಿಂಗಳಲ್ಲಿ ಹಂಚಿಕೆಯಾದ ಆಹಾರ ಧಾನ್ಯಗಳಲ್ಲಿ ಕಲ್ಮಶ ಗಳಿದ್ದಿದ್ದಾ ಕಂಡುಬಂದಿತ್ತದೆ. ಅನಂತರ ಆ ತರಹ ಯಾವ ಪ್ರಕರಣಗಳೂ ಇರುವುದಿಲ್ಲ.

(ಆ) ಹೌದು.

(ಇ) ಕೇಂದ್ರ ಸರ್ಕಾರದಿಂದ ರಾಜ್ಯಕ್ಕೆ ಬಂದ ಆಹಾರ ಧಾನ್ಯವನ್ನು ಭಾರತ ಸರ್ಕಾರದ ಆಹಾರ ಕಾರ್ಪೊರೇಷನ್ ರವಾನೆ ಮಾಡಿದೆ. ಉಪಯೋಗಿಸುವುದಕ್ಕೆ ಮೊದಲು ಆಹಾರ ಧಾನ್ಯದಲ್ಲಿರುವ ಇಂತಹ ವಿಷಪೂರಿತ ಬೀಜಗಳನ್ನು ಆರಿಸಿ ಶುದ್ಧಿ ಮಾಡುವ ಸಲುವಾಗಿ ಎಲ್ಲಾ ಬಳಕೆದಾರರಿಗೂ ಜಿಲ್ಲಾಧಿಕಾರಿಗಳು ಸ್ಥಳೀಯ ವಾರ್ತಾಪ್ರಚಾರದ ಮೂಲಕ ಆದೇಶವನ್ನು ಕೊಡಲಾಗಿದೆ.

ಉತ್ತರ ಕನ್ನಡ ಜಿಲ್ಲೆ ಬಿಳಿಗಿ ಗ್ರಾಮ ಹರಿಜನರ ಮೇಲೆ ದೌರ್ಜನ್ಯ.

೬೬. ಶ್ರೀ ಎಂ. ಎಚ್. ಜಯಪ್ರಕಾಶ್ ನಾರಾಯಣ್ (ಸಿರ್ಸಿ).—ಮಾನ್ಯ ಮುಖ್ಯ ಮಂತ್ರಿಗಳು ಈ ವಿಷಯಗಳನ್ನು ದಯೆ ಯಿಟ್ಟು ತಿಳಿಸುವರೆ :—

(ಅ) ಉತ್ತರ ಕನ್ನಡ ಜಿಲ್ಲೆ ಸಿದ್ದಾಪುರ ತಾಲ್ಲೂಕು ಬಿಳಿಗಿ ಗ್ರಾಮದಲ್ಲಿ ತಾರೀಖು ೦೨-೯-೧೯೭೩ ರಂದು ಹರಿಜನರ ಮೇಲೆ ದೌರ್ಜನ್ಯ ನಡೆದು ಹರಿಜನನೊಬ್ಬನು ಸಾವಿಗೀಡಾಗಿದ್ದು ಸರ್ಕಾರದವರ ಗಮನಕ್ಕೆ ಬಂದಿದೆಯೇ ;

(ಆ) ಈ ಬಗ್ಗೆ ಪೋಲೀಸ್ ಅಧಿಕಾರಿಗಳು ಕೈಕೊಂಡಿರುವ ಕ್ರಮಗಳಾವುವು ಮತ್ತು ಈ ರೀತಿ ಗಲಭೆ ನಡೆಯಲು ಮತ್ತು ಹರಿಜನನೊಬ್ಬನ ಪ್ರಾಣ ಹಾನಿ ಯಾಗಲು ಕಾರಣಗಳಾವುವು ;

(ಇ) ಈ ದೊಂಬಿಗೆ ಕಾರಣಕರ್ತರಾರು ? ಅವರ ಮೇಲೆ ಪೋಲೀಸ್ ಇಲಾಖೆಯವರು ತೆಗೆದು ಕೊಂಡ ಕ್ರಮಗಳಾವುವು ?

Sri D. Devaraj Urs (Chief Minister).—Ans (ಅ) Yes.

(ಆ) The offence was registered at 58-00 hours on 10-9 1973 in Sidapur Police Station Cr. No 58/73 under sections 147, 149, 323 504, 302 IPC The dispute took place between the Harijans and Namadharis of Rosamanja due to land dispute. In the scuffle that ensued all the persons were injured. The deceased Hari, being serious, was shifted to Sirsi for treatment where he expired at 22-30 hours.

(ಇ) Both the Harijans and the Namadharis are responsible for this dispute. The offence was registered in Siddapur Police Station on 10-9-1973 against the accused in Cr. No 56/73 under sections 147, 149, 323, 504, 302 IPC. After Charging the accused under section 302 IPC also the Circle Police Inspector, Sirsi, has taken up further investigation on 11-9-1973 which is in progress.

ಕಾರ್ಡ್‌ಗಳ ಆಧಾರದ ಮೇಲೆ ಆಹಾರ ಧಾನ್ಯಗಳ ಹಂಚಿಕೆ

೬೭. ಶ್ರೀ ಎಂ. ಎಚ್. ಜಯಪ್ರಕಾಶ್ ನಾರಾಯಣ್ (ಸಿರ್ಸಿ).—ಮಾನ್ಯ ಆಹಾರ ಮತ್ತು ಅರಣ್ಯ ಮಂತ್ರಿಗಳು ಈ ವಿಷಯಗಳನ್ನು ದಯಮಾಡಿಸಿ ತಿಳಿಸುವರೆ :—

(ಅ) ಬೆಂಗಳೂರು ನಗರದಲ್ಲಿ ಹಾಲಿ ಇರುವ ರೇಷನ್ ಕಾರ್ಡುಗಳೆಷ್ಟು ; ಅವುಗಳ ಆಧಾರದ ಮೇಲೆ ಒದಗಿಸಲು ಅಂದಾಜು ಮಾಡಿರುವ ಆಹಾರ ಧಾನ್ಯಗಳ ಪ್ರಮಾಣವೆಷ್ಟು ;

(ಆ) ಪ್ರತಿ ಕಾರ್ಡುದಾರರಿಗೂ ಅಕ್ಕಿ, ಗೋಧಿ ಮತ್ತು ಸಕ್ಕರೆ ಯಾವ ಪ್ರಮಾಣದಲ್ಲಿ ಒದಗಿಸ ಲಾಗುತ್ತಿದೆ.

(ಇ) ರಾಜ್ಯದಲ್ಲಿ ಆಹಾರ ಸ್ವಾವಲಂಬನೆಯಾಗಲು ಎಷ್ಟು ಕಾಲ ಬೇಕಾಗುವುದೆಂ ಈ ದಿಸೆಯಲ್ಲಿ ಸರ್ಕಾರ ಕೈಕೊಂಡಿರುವ ಸಕ್ರೀಯ ಪಾತ್ರ ಯಾವುದು ?